ಕರ್ನಾಟಕ ಸರ್ಕಾರ

ನಂ:ಎಎಲ್‌ಎನ್ [ಎ] [ಎ] ಎಸ್‌ಆರ್ 29/2013-14

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ: 01-07-2013.

:: ಅಧಿಕೃತ ಜ್ಞಾಪನ ::

ವಿಷಯ: ಬೆಂಗಳೂರು ಜಿಲ್ಲೆ, **ಆನೇಕಲ್** ತಾಲ್ಲೂಕು, **ಅತ್ತಿಬೆಲೆ ಹೋಬಳಿ, ತಿರುಮಗೊಂಡನಹಳ್ಳಿ** ಗ್ರಾಮದ ಸ.ನಂ: 31/2 ರಲ್ಲಿ 3-02 **ಎಕರೆ/ಗುಂಟೆ** ಮತ್ತು ಸ.ನಂ: 32/2 ರಲ್ಲಿ 3-20 **ಎಕರೆ/ಗುಂಟೆ ಒಟ್ಟು 6-22 ಎಕರೆ/ಗುಂಟೆ [ಆರು ಎಕರೆ ಇಪ್ಪತ್ತೆರಡು ಗುಂಟೆ]** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ, **ವಾಸದ** ಉದ್ದೇಶಕ್ಕೆ ಭೂ ಪರಿವರ್ತನೆ ಕೋರಿ **ಶ್ರೀಯುತರಾದ: 1] ಆರ್.ನಾರಾಯಣ ರೆಡ್ಡಿ 2] ಆರ್.ರಾಮಚಂದ್ರ 3] ಆರ್.ಪಾಪರೆಡ್ಡಿ, ತಿರುಮಗೊಂಡನಹಳ್ಳಿ** ಗ್ರಾಮ, **ಅತ್ತಿಬೆಲೆ ಹೋಬಳಿ, ಆನೇಕಲ್** ತಾಲ್ಲೂಕುರವರು ಸಲ್ಲಿಸಿರುವ ಅರ್ಜಿ ದಿನಾಂಕ: 29-05-2013.

ಉಲ್ಲೇಖ:
1. ಸರ್ಕಾರಿ ಸುತ್ತೋಲೆ ಸಂಖ್ಯೆ: ಆರ್‌ಡಿ 7 ಎಲ್‌ಜಿಪಿ 95 ದಿನಾಂಕ : 07-06-1999.
2. ಸರ್ಕಾರದ ಸುತ್ತೋಲೆ ಪತ್ರದ ಸಂಖ್ಯೆ: ಆರ್‌ಡಿ 56 ಎಲ್‌ಜಿಪಿ 2008 ದಿನಾಂಕ: 10-09-2008 ಮತ್ತು 24-09-2008.
3. ತಹಶೀಲ್ದಾರ್, ಆನೇಕಲ್ ತಾಲ್ಲೂಕು ರವರ ವರದಿ ನಂ: ಎಎಲ್‌ಎನ್/ ಎಸ್‌ಆರ್ [ಎಸ್] 16/2013-14 ದಿನಾಂಕ; 13-06-2013.
4. ಭೂ ಪರಿವರ್ತನಾ ಶುಲ್ಕ ರೂ.**3,56,648-00** ಹಾಗೂ ಪೋಡಿ ಶುಲ್ಕ ರೂ.**110-00** ಸೇರಿ ಒಟ್ಟು ರೂ.**3,56,758-00** ಗಳನ್ನು ಚಲನ್ **ದಿನಾಂಕ; 01-07-2013**ರಂತೆ ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.
5. **ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು** ಹಾಗೂ ಸದಸ್ಯ ಕಾರ್ಯದರ್ಶಿಗಳು, **ಆನೇಕಲ್ ಯೋಜನಾ ಪ್ರಾಧಿಕಾರ, "ಅಣ್ಣ", ನಂ: 430, ಚಂದ್ರಾಪುರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-99 ಇವರ ಪತ್ರದ ಸಂಖ್ಯೆ: ಆಯೋಪ್ರಾ/ ಭೂ.ಪ.ಆ/115/2013-14 ದಿನಾಂಕ; 14-06-2013.**

ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 95(2), 95(4) ಮತ್ತು 95(7)ರ ಷರತ್ತುಗಳು, ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ)ನಿಯಮಗಳು 1994ರ ನಿಯಮ 107(1)ರಂತೆ ಎಕರೆ ಒಂದಕ್ಕೆ ರೂ.**54,450-00 (ಐವತ್ನಾಲ್ಕು ಸಾವಿರದ ನಾಲ್ಕು ನೂರಾ ಐವತ್ತು ರೂಪಾಯಿಗಳು ಮಾತ್ರ)** ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣ ಜಮಾ ಮಾಡಿ ಚಲನ್‌ನ್ನು ಹಾಜರುಪಡಿಸಿರುವ ಮೇರೆಗೆ ಅರ್ಜಿದಾರರಾದ **ಶ್ರೀಯುತರಾದ: 1] ಆರ್.ನಾರಾಯಣ ರೆಡ್ಡಿ 2] ಆರ್.ರಾಮಚಂದ್ರ 3] ಆರ್.ಪಾಪರೆಡ್ಡಿ, ತಿರುಮಗೊಂಡನಹಳ್ಳಿ** ಗ್ರಾಮ, **ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು** ರವರ ಅರ್ಜಿಯನ್ನು ಪರಿಗಣಿಸಿ **ಆನೇಕಲ್** ತಾಲ್ಲೂಕು, **ಅತ್ತಿಬೆಲೆ** ಹೋಬಳಿ, **ತಿರುಮಗೊಂಡನಹಳ್ಳಿ** ಗ್ರಾಮದ ಸ.ನಂ: 31/2 ರಲ್ಲಿ 3-02 **ಎಕರೆ/ಗುಂಟೆ** ಮತ್ತು ಸ.ನಂ: 32/2 ರಲ್ಲಿ 3-20 **ಎಕರೆ/ಗುಂಟೆ ಒಟ್ಟು 6-22 ಎಕರೆ/ಗುಂಟೆ [ಆರು ಎಕರೆ ಇಪ್ಪತ್ತೆರಡು ಗುಂಟೆ]** ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ **ವಾಸದ** ಉದ್ದೇಶಕ್ಕೆ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಎ.ಪಿ.ಎ/ ಬಿ.ಎಂ.ಆರ್.ಡಿ.ಎ [ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಬಿ.ಎಂ.ಪಿ ಬಿ.ಎಂ.ಐ.ಸಿ.ಎ.ಪಿ.ಎ/ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.
2. ಈ ಪರಿವರ್ತಿತ ಜಮೀನನ್ನು **ವಾಸದ** ಉದ್ದೇಶಕ್ಕೆ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಎ.ಪಿ.ಎ/ ಬಿ.ಎಂ.ಆರ್.ಡಿ.ಎ [ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಬಿ.ಎಂ.ಪಿ ಬಿ.ಎಂ.ಐ.ಸಿ.ಎ.ಪಿ.ಎ/ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್/ ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ. ನಿವೇಶನ ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಐ.ಎ.ಎ.ಪಿ.ಎ/ ಬಿ.ಎಂ.ಆರ್.ಡಿ.ಎ [ಸ್ಥಳೀಯ ಯೋಜನಾ ಪ್ರಾಧಿಕಾರ] ಬಿ.ಬಿ.ಎಂ.ಪಿ ಬಿ.ಎಂ.ಐ.ಸಿ.ಎ.ಪಿ.ಎ/ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

5. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೇ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೊಂದಣಾಧಿಕಾರಿಗಳಿಂದ / ಉಪನೊಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ. ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿನ ಪೂರ್ಣ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳನ್ನು ವಿದ್ಯುಚ್ಛಕ್ತಿ , ಕುಡಿಯುವ ನೀರು, ರಸ್ತೆ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತಿಯ ಒದಗಿಸಿ ಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. ಈ ಜಮೀನಿಗೆ ತಾಕು ಫೂಟು ಖರಾಬ್ ಜಮೀನಿದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಜಮೀನನ್ನು **ವಾಸದ** ಉದ್ದೇಶಕ್ಕಾಗಿ ಬಳಸಲು ಭೂ ಪರಿವರ್ತನೆ ನೀಡಿದೆ. **ಸ.ನಂ; 31/2 ರಲ್ಲಿ 0–07 ಗುಂಟೆ** ಬಿ ಖರಾಬು ವಿಸ್ತೀರ್ಣದ ಜಮೀನು ಸರ್ಕಾರದ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ ಬಿ ಖರಾಬಿನ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಸೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲುಡಿ.7556–665 ಆರ್ ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ:ಪಿ1/7(11) 67, ದಿನಾಂಕ:1–1–1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯ ಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯ ಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9. ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ, ಇತರೆ ಕಶ್ಮಲಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಗೆ ಅನುಮತಿ ಹೊಂದಿರತಕ್ಕದ್ದು.

10. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ರಿಟ್ ಅರ್ಜಿ/ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11. ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರ-ಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12. ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ರಲ್ಲಿ ಸೂಕ್ಷ್ಮ ವಲಯ [Sensitive Zone]ನಲ್ಲಿ ಬರುವ ಪ್ರದೇಶಗಳಿಗೆ ಸಂಬಂಧಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಭಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕೈಗೊಳ್ಳಬಾರದು.

13. ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

14. ಪ್ರಶ್ನಿತ ಜಮೀನು ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136 (3) ರ ಅಡಿ ವಿಚಾರಣೆ ನಡೆಸಿ, ಹೊರಡಿಸಿರುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

15. ಸದರಿ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ ತಕ್ಷಣವೇ ಮೋಡಿ ಮಾಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

16. ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆಮಾಚಿ ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತ ಜ್ಞಾಪನ ಪತ್ರ ಪಡೆದಿರುವುದು ದೃಢಪಟ್ಟಲ್ಲಿ ನಂತರ ಇನ್ನಾವುದೇ ತಿಳುವಳಿಕೆ ಇಲ್ಲದೇ ಈ ಅಧಿಕೃತ ಜ್ಞಾಪನ ತನ್ನಿಂತಾನೇ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರರಿಕೆ ಅರ್ಜಿದಾರರ ಆಗಿರುತ್ತದೆ.

17 ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

**:: ಷೆಡ್ಯೂಲ್ ವಿವರ ::**

ಬೆಂಗಳೂರು ಜಿಲ್ಲೆ, **ಆನೇಕಲ್** ತಾಲ್ಲೂಕು, **ಅತ್ತಿಬೆಲೆ** ಹೋಬಳಿ, **ತಿರುಮಗೊಂಡನಹಳ್ಳಿ** ಗ್ರಾಮದ ಸ.ನಂ: **31/2 ರಲ್ಲಿ 3-02 ಎಕರೆ/ಗುಂಟೆ ಮತ್ತು ಸ.ನಂ: 32/2 ರಲ್ಲಿ 3-20 ಎಕರೆ/ಗುಂಟೆ ಒಟ್ಟು 6-22 ಎಕರೆ/ಗುಂಟೆ [ಆರು ಎಕರೆ ಇಪ್ಪತ್ತೆರಡು ಗುಂಟೆ]** ವಿಸ್ತೀರ್ಣ **ವಾಸದ** ಉದ್ದೇಶಕ್ಕೆ ಭೂ ಪರಿವರ್ತಿತ ಜಮೀನಿಗೆ ಚೆಕ್ಕುಬಂದಿ:

**:: ಚೆಕ್ಕುಬಂದಿ ::**

| | ಸ.ನಂ; 31/2 ರಲ್ಲಿನ 3-02 ಎಕರೆಗೆ | ಸ.ನಂ: 32/2 ರಲ್ಲಿನ 3-20 ಎಕರೆಗೆ |
|---|---|---|
| ಪೂರ್ವಕ್ಕೆ: | ರೀ.ಸ.ನಂ; 32 ರ ಜಮೀನು. | ರೀ.ಸ.ನಂ; 33 ರ ಜಮೀನು. |
| ಪಶ್ಚಿಮಕ್ಕೆ : | ಇಗ್ಗಲೂರು ಗ್ರಾಮದ ಗಡಿ. | ರೀ.ಸ.ನಂ: 31 ರ ಜಮೀನು. |
| ಉತ್ತರಕ್ಕೆ : | ರೀ.ಸ.ನಂ: 31/1 ರ ಜಮೀನು. | ರೀ.ಸ.ನಂ: 32/1 ರ ಜಮೀನು. |
| ದಕ್ಷಿಣಕ್ಕೆ : | ರೀ.ಸ.ನಂ: 30 ರ ಜಮೀನು. | ರೀ.ಸ.ನಂ; 30 ರ ಜಮೀನು. |

ಸಹಿ/-

**(ಡಾ: ಜಿ.ಸಿ.ಪ್ರಕಾಶ್)**

**ಜಿಲ್ಲಾಧಿಕಾರಿಗಳು,**

ಬೆಂಗಳೂರು ಜಿಲ್ಲೆ, ಬೆಂಗಳೂರು.

ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ.

1. ತಹಸೀಲ್ದಾರ್, **ಆನೇಕಲ್** ತಾಲ್ಲೂಕು ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಗಣಕೀಕೃತ ಆರ್.ಟಿ.ಸಿ ಯಲ್ಲಿ ಕೂಡಲೇ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿತಗೊಳಿಸಲಾಗುವುದು.
2. ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, "ಅಣ್ಣಿ", ನಂ: 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-99 ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಉಪವಿಭಾಗಾಧಿಕಾರಿಗಳು, ಬೆಂಗಳೂರು **ದಕ್ಷಿಣ** ಉಪವಿಭಾಗ, ಬೆಂಗಳೂರು.
4. ಉಪನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5. ಉಪನೋಂದಣಾಧಿಕಾರಿಗಳು, **ಅತ್ತಿಬೆಲೆ** ಹೋಬಳಿ, **ಆನೇಕಲ್** ತಾಲ್ಲೂಕು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಅರ್ಜಿದಾರರಾದ **ಶ್ರೀಯುತರಾದ: 1] ಆರ್.ನಾರಾಯಣ ರೆಡ್ಡಿ 2] ಆರ್.ರಾಮಚಂದ್ರ 3] ಆರ್.ಪಾಪರೆಡ್ಡಿ, ತಿರುಮಗೊಂಡನಹಳ್ಳಿ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು** ರವರಿಗೆ ದೃಢೀಕೃತ ಅಂಚೆ ಮೂಲಕ.
7. ಹೆಚ್ಚಿನ ಪ್ರತಿ.

ಜಿಲ್ಲಾಧಿಕಾರಿಗಳು,

ಬೆಂಗಳೂರು ಜಿಲ್ಲೆ, ಬೆಂಗಳೂರು.